**ದಿನಾಂಕಃ 13-10-2023 ರಂದು ಸಾಕ್ಷಿಗೆ ಪುನಃ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ಎನ್ ವಿ ಎನ್ ರವರಿಂದಃ**

8. ನಿ.ಪಿ. 3 ದೂರಿನಲ್ಲಿ ನಾನು ತಾತ್ಕಾಲಿಕ ಗುತ್ತಿಗೆ ಆದೇಶ ನೀಡಿದ್ದಾರೆ ಎಂದು ಏಕೆ ಹೇಳಿದ್ದೇನೆ ಎಂದರೆ ಹೊಸ ಯೋಜನೆಯಾಗಿದ್ದರಿಂದ ಸರ್ಕಾರ ಪ್ರಥಮ ಬಾರಿಗೆ ಹಾಲಿನ ಪುಡಿ ಸರಬರಾಜು ಮಾಡಲು ಪ್ರಾರಂಭ ಮಾಡಿ ಎಂದು ಆಹಾರ ಇಲಾಖೆಯವರಿಗೆ ನಿರ್ದೇಶನ ನೀಡಿದರು. ನಂತರ ಆದೇಶ ಕೊಡುವುದಾಗಿ ಸರ್ಕಾರ ಹೇಳಿತು . ಆ ಪ್ರಕಾರ ದಿನಾಂಕ 30.09.2013 ರಂದು ಆದೇಶ ಹೊರಡಿಸಿತು .ಯೋಜನೆ ಹೊಸದಾದ್ದರಿಂದ ದೂರನ್ನು ಕೊಟ್ಟಾಗ ನಾನು ತಾತ್ಕಾಲಿಕ ಗುತ್ತಿಗೆ ಆದೇಶ ಎಂದು ಹೇಳಿದ್ದೇನೆ. ತಾತ್ಕಾಲಿಕ ಎಂದರೆ ಆದೇಶ ಬರುವವರೆಗೆ ಎಂದು ಹೇಳಿದ್ದೇನೆ. ಕೆ ಎಂ ಎಫ್ ಧಾರವಾಡರವರು ಆ ರೀತಿ ನನಗೆ ಹೇಳಿದ್ದರು. ಅವರು ಬಹಳ ಮೊದಲು ಹೇಳಿದ್ದರು ಅವರು ಹೇಳಿದ್ದ ದಿನಾಂಕ ನಿಖರವಾಗಿ ನೆನಪಿಲ್ಲ ಆದರೆ ಯೋಜನೆ ಪ್ರಾರಂಭ ಮಾಡುವಾಗಲೇ ಹೇಳಿದ್ದರು. ನನಗೆ ಆ ರೀತಿ ಹೇಳಿದ ಕೆ ಎಂ ಎಫ್ ಅಧಿಕಾರಿ ಯಾರು ಎಂದು ನೆನಪಿಲ್ಲ. ನನಗೆ ಮೌಖಿಕವಾಗಿ , ತಾತ್ಕಾಲಿಕವಾಗಿ ಹಾಲಿನ ಪುಡಿ ಸರಬರಾಜು ಗುತ್ತಿಗೆ ಕೊಟ್ಟಿದ್ದಾರೆ ಎಂದು ಆರೋಪಿಗೆ ಅಥವಾ ತಾಲೂಕು ಪಂಚಾಯತಿಗೆ ಅಥವಾ ಜಿಲ್ಲಾ ಪಂಚಾಯತಿಗೆ ಅರ್ಜಿಯನ್ನು ಕೊಟ್ಟಿರುವುದಿಲ್ಲ. ನನಗೆ ಆ ರೀತಿ ಅರ್ಜಿ ಕೊಡಲು ತೊಂದರೆ ಇರಲಿಲ್ಲ. ಆದರೆ ನನಗೆ ಹಾಲಿನ ಪುಡಿ ಸರಬರಾಜು ಮಾಡುವಂತೆ ಹೇಳಿಬಿಟ್ಟಿದ್ದರು. ಉತ್ತರ ಕನ್ನಡ ಜಿಲ್ಲೆಯ ಜಿಲ್ಲಾ ಮಟ್ಟದ ಅಕ್ಷರ ದಾಸೋಹ ಅಧಿಕಾರಿ ನನಗೆ ಹಾಲಿನ ಪುಡಿ ಸರಬರಾಜು ಮಾಡುವಂತೆ ಹೇಳಿದ್ದರು. ಅವರು ಲಿಖಿತವಾಗಿ ಆ ರೀತಿ ಹೇಳಲಿಲ್ಲ ನಂತರ ಲಿಖಿತವಾಗಿ ಆದೇಶ ಕೊಡುವುದಾಗಿ ಹೇಳಿದರು. ಅದರಂತೆ 30.09.2013 ರಂದು ಅವರು ಆದೇಶ ಕೊಟ್ಟರು. ನಾನು ಬಿ.ಎ. ಪದವಿ ಅನುತ್ತೀರ್ಣ ಆಗಿದ್ದೇನೆ. ನನಗೆ ಈಗ ತೋರಿಸಿದ ನಾಲ್ಕು ದೃಢೀಕೃತ ನಮೂನೆಗಳು ಅಕ್ಷರ ದಾಸೋಹ ಕಾರ್ಯಕ್ರಮದ ಅಡಿಯಲ್ಲಿ ಹಾಲು ಪುಡಿ ಸರಬರಾಜು ಮಾಡಿದಾಗ ನಮೂನೆಯನ್ನು ನೀಡುತ್ತಾರೆ. ಅದರಲ್ಲಿ ವಿತರಿಸುವವರ ಸಹಿ ಮತ್ತು ಅದನ್ನು ಪಡೆಯುವ ಶಾಲೆಯ ಮುಖೋಪಾಧ್ಯಾಯರ ಸಹಿ ಇರುತ್ತದೆ ಎಂದರೆ ಹೌದು . ಅವುಗಳನ್ನು ನಿ.ಡಿ. 7 ರಿಂದ 10 ಎಂದು ಗುರುತಿಸಲಾಯಿತು. ಆದರೆ ಯೋಜನೆ ಪ್ರಾರಂಭಿಸಿದಾಗ ಆ ನಮೂನೆ ಇರಲಿಲ್ಲ ಪ್ರಾರಂಭದಲ್ಲಿ ನೀವು ಶುರು ಮಾಡಿ

ಎಂದು ಹೇಳಿದ್ದರು ನಂತರ ಆ ನಮೂನೆ ಜಾರಿಗೆ ತಂದರು. ಅದು ಕೆ ಎಂ ಎಫ್ ಸಂಸ್ಥೆಯ ನಮೂನೆಯಾಗಿದೆ ಎಂದರೆ ಹೌದು . ಆ ನಮೂನೆಯನ್ನು ಯಾವ ದಿನಾಂಕದಿಂದ ಜಾರಿಗೆ ತಂದರು ಎಂದು ನನಗೆ ಅನಾರೋಗ್ಯವಾದ ಕಾರಣ ಹೇಳಲು ಸಾಧ್ಯವಿಲ್ಲ. ಅಕ್ಷರ ದಾಸೋಹ ಕಾರ್ಯಕ್ರಮ ಆದಾಗಿನಿಂದಲೇ ನಿ.ಡಿ. 7 ರಿಂದ 10 ರಂತಹ ನಮೂನೆಗಳನ್ನು ಪಾಲನೆ ಮಾಡಬೇಕು ಎಂದು ನಿರ್ದೇಶನ ಕೊಟ್ಟಿದ್ದಾರೆ ಎಂದರೆ ಪ್ರಾರಂಭದಲ್ಲಿ ಆ ನಮೂನೆ ಸಿದ್ಧ ಆಗಿರಲಿಲ್ಲ. ಆ ನಮೂನೆ ಜಾರಿಗೆ ಬಂದ ಮೇಲೆ ನಾನು ಹಾಲಿನ ಪುಡಿ ಸರಬರಾಜು ಮಾಡಿದಾಗ ಆ ನಮೂನೆಗಳನ್ನು ಪಾಲನೆ ಮಾಡಿದ್ದೇನೆ. ಆರೋಪಿಗೆ ನಾನು ಸಲ್ಲಿಸಿದ್ದೇನೆ ಎಂದು ಹೇಳಿರುವ ಹಾಲು ಪುಡಿಯ ವಿವರದ ಬಗ್ಗೆ ಮೇಲ್ಕಂಡ ನಮೂನೆಯನ್ನು ಪಾಲನೆ ಮಾಡಿರುವುದಿಲ್ಲ. ಆರೋಪಿಯನ್ನು ಲೋಕಾಯುಕ್ತ ಪೊಲೀಸ್ ನವರು ಈ ಪ್ರಕರಣದಲ್ಲಿ ಟ್ರ್ಯಾಪ್ ಮಾಡಿದ ಒಂದುವರೆ ತಿಂಗಳ ನಂತರ ನಾನು ಸರಬರಾಜು ಮಾಡಿದ್ದ ಹಾಲಿನ ಪುಡಿಯ ಹಣವನ್ನು ನನಗೆ ಪಾವತಿ ಮಾಡಿರುತ್ತಾರೆ. ಆ ರೀತಿ ಹಣ ನನಗೆ ಪಾವತಿ ಮಾಡಿದಾಗ ನಿ.ಡಿ. 7 ರಿಂದ 10 ರಂತಹ ನಮೂನೆಗಳನ್ನು ನನ್ನಿಂದ ಭರ್ತಿ ಮಾಡಿಸಿಕೊಂಡರಾ ಎಂದರೆ ಹೌದು ಇರಬಹುದು. (ಸಾಕ್ಷಿ ಸ್ವಲ್ಪ ಆರೋಗ್ಯದ ಸಮಸ್ಯೆ ಹೊಂದಿರುವುದು ಮತ್ತು ನೆನಪಿಸಿಕೊಳ್ಳಲು ಪ್ರಯತ್ನ ಪಡುವುದು ಗಮನಕ್ಕೆ ಬಂದಿರುತ್ತದೆ ). ಆರೋಪಿಯನ್ನು ಟ್ರ್ಯಾಪ್ ಮಾಡಿದ ಮೇಲೆ ನನಗೆ ಹಾಲಿನ ಪುಡಿ ಸರಬರಾಜು ಮಾಡಿದ ಹಣ ನೀಡುವುದಕ್ಕೆ ಮೊದಲು ಅನೇಕ ಪ್ರಶ್ನಾವಳಿಗಳನ್ನು ನೀಡಿದ್ದರು ಎಂದರೆ ಇಲ್ಲ ಆದರೆ ನಮೂನೆಗಳನ್ನು ಕೆ ಎಂ ಎಫ್ ನವರು ಕೊಟ್ಟ ಮೇಲೆ ನನ್ನ ಸಹಿಯನ್ನು ಅದಕ್ಕೆ ಪಡೆದಿದ್ದಾರೆ. ಆರೋಪಿಗೆ ನಾನು ಹಾಲಿನ ಪುಡಿ ಸರಬರಾಜು ಮಾಡಿದ ಬಗ್ಗೆ ವಿವರದ ಅರ್ಜಿ ಕೊಟ್ಟಾಗ ನಿ.ಡಿ. 7 ರಿಂದ 10 ರಂತಹ ನಮೂನೆ ಜಾರಿಗೆ ಬಂದಿರಲಿಲ್ಲ. ದಿನಾಂಕ 30.09.2013 ರಲ್ಲಿ ನಂದಿನಿ ಹಾಲಿನ ಪುಡಿ ಸರಬರಾಜು ಮಾಡಲು ಗುತ್ತಿಗೆದಾರನನ್ನು ನಿಯೋಜಿಸಿರುವ ಬಗ್ಗೆ ಈಗ ತೋರಿಸಿದ ದೃಢೀಕೃತ ದಾಖಲಾತಿಗಳ ಪ್ರಕಾರ ಆದೇಶ ಬಂದಿದೆ ಎಂದರೆ ಹೌದು . ಅದು ಎರಡು ಹಾಳೆ ಇದ್ದು ಅದರಲ್ಲಿ ಒಂದು ಪತ್ರ ಮತ್ತು ಇನ್ನೊಂದು ದೃಢೀಕೃತ ಉದ್ಧೃತ ಇರುತ್ತದೆ . ಅದನ್ನು ಒಟ್ಟಾರೆಯಾಗಿ ನಿ.ಡಿ. 11 ಎಂದು ಗುರುತಿಸಲಾಯಿತು. ಸದರಿ ಆದೇಶ ಬಂದ ಮೇಲೆ ನಾನೇ ನಿಮ್ಮ ಹಾಲು ಪುಡಿ ಸರಬರಾಜು ಮಾಡುವ ಗುತ್ತಿಗೆದಾರ ಎಂದು ಆರೋಪಿ ಬಳಿ ಹೋಗಿದ್ದೇನಾ ಎಂದರೆ ಬಾಯಿ ಮಾತಿನಲ್ಲಿ ಆರೋಪಿಗೆ ಹೇಳಿದ್ದೇನೆ ಆದರೆ ಆದೇಶ ಕೊಟ್ಟಿರುವುದಿಲ್ಲ. ಆ ರೀತಿ ಹಾಲಿನ ಪುಡಿ ಸಾಗಾಣಿಕೆ

ಗುತ್ತಿಗೆ ಪಡೆಯಬೇಕಾದರೆ ಅದಕ್ಕೆ ಇಂತಿಷ್ಟು ವಾಹನ ಹೊಂದಿರಬೇಕು ಇತ್ಯಾದಿಯಾಗಿ ಶರತ್ತುಗಳು ಇರುತ್ತವೆ ಎಂದರೆ ಹೌದು . ಆದರೆ ಪ್ರಾರಂಭದಲ್ಲಿ ಈ ಯೋಜನೆ ಬಂದಾಗ ಅಕ್ಷರ ದಾಸೋಹ ಬಿಸಿಯೂಟ ಯೋಜನೆಯಡಿಯಲ್ಲಿ 2011 ರವರೆಗೆ ಯಾರು ಸರಬರಾಜು ಮಾಡುತ್ತಿದ್ದಾರೆಯೋ ಅವರಿಗೆ ಹಾಲಿನ ಪುಡಿ ಸರಬರಾಜು ಮಾಡುವಂತೆ ಮೌಖಿಕವಾಗಿ ಹೇಳಿದ್ದರು. 2010 ರಲ್ಲಿ ನಾನು ಬಿಸಿಯೂಟ ಯೋಜನೆಯಡಿಯಲ್ಲಿ ಆಹಾರ ಪದಾರ್ಥ ಸರಬರಾಜು ಮಾಡುತ್ತಿದ್ದೆ ಎಂದರೆ ಹೌದು . ದಿನಾಂಕ 16.02.2010 ರಂದು ಕಾರ್ಯ ನಿರ್ವಾಹಕ ಅಧಿಕಾರಿ ತಾಲೂಕು ಪಂಚಾಯತಿಯವರು ನನಗೆ ಈಗ ತೋರಿಸಿದ ಪ್ರಕಾರ ಒಂದು ನೋಟಿಸನ್ನು ನೀಡಿದ್ದಾರೆ ಎಂದರೆ ಹೌದು ಅದನ್ನು ಆರೋಪಿಯೇ ಸ್ವತಃ ನೀಡಿದ್ದಾನೆ ಎಂದು ಸಾಕ್ಷಿ ನುಡಿಯುತ್ತಾರೆ. ಅದು ನೋಟರಿಕೃತ ನೋಟಿಸಿನ ನಕಲು ಆಗಿದ್ದು ಅದನ್ನು ನಿ.ಡಿ. 12 ಎಂದು ಗುರುತಿಸಲಾಯಿತು. ಆ ನೋಟಿಸನ್ನು ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ನೀಡಿದ್ದಾರೆ ಮತ್ತು ಆರೋಪಿ ಆಗ ಕಾರ್ಯ ನಿರ್ವಾಹಕ ಅಧಿಕಾರಿಯಾಗಿರಲಿಲ್ಲ ಎಂದರೆ ಆರೋಪಿ ಕಾರ್ಯ ನಿರ್ವಾಹಕ ಅಧಿಕಾರಿ ಇಲ್ಲದಿದ್ದಾಗ ಪ್ರಭಾರೆಯಲ್ಲಿ ಇರುತ್ತಿದ್ದರು . ಆ ರೀತಿಯಾಗಿ ಆ ನೋಟಿಸನ್ನು ನನಗೆ ಆರೋಪಿ ಕೊಟ್ಟಿದ್ದಾನೆ. ನಿ.ಡಿ. 12 ರಲ್ಲಿ ಆರೋಪಿಯ ರುಜು ಇಲ್ಲ ಎಂದರೆ ಹೌದು . ಆರೋಪಿ ಆಗ ಅಕ್ಷರ ದಾಸೋಹ ಸಹಾಯಕ ನಿರ್ದೇಶಕ ಆಗಿ ಕೆಲಸ ಮಾಡುತ್ತಿದ್ದ ಎಂದರೆ ಹೌದು . ಈಗ ತೋರಿಸಿದ ಮತ್ತೊಂದು ನೋಟರಿಕೃತ ನಕಲಿನ ಪ್ರಕಾರ ನನಗೆ ತಾಲೂಕು ಪಂಚಾಯತಿಯಿಂದ ಆರೋಪಿ ನನಗೆ ನೋಟಿಸು ಕೊಟ್ಟಿದ್ದಾರೆ ಎಂದರೆ ಇರಬಹುದು ನನಗೆ ಈಗ ಸರಿಯಾಗಿ ನೆನಪಾಗುತ್ತಿಲ್ಲ. ಸದರಿ ನೋಟರಿಕೃತ ನಕಲನ್ನು ನಿ.ಡಿ. 13 ಎಂದು ಗುರುತಿಸಲಾಯಿತು. ದಿನಾಂಕ 01.08.2012 ರಂದು ನಾನು ಕೆಲವು ವೋಚರ್ ಗಳನ್ನು ಸಲ್ಲಿಸಿಲ್ಲ ಎಂದು ತಾಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿ ನನಗೆ ನೋಟಿಸು ಕೊಟ್ಟಿದ್ದಾರೆ ಎಂದರೆ ಇರಬಹುದು ನನಗೆ ನೆನಪಿಲ್ಲ ಅದು ನೋಟರಿಕೃತ ನಕಲಾಗಿದ್ದು ಅದನ್ನು ನಿ.ಡಿ. 14 ಎಂದು ಗುರುತಿಸಲಾಯಿತು. ಆರೋಪಿಯ ಕಚೇರಿಯಲ್ಲಿ ರಮಾ ಭಂಡಾರಿ ಎಂಬ ಪ್ರಥಮ ದರ್ಜೆ ಸಹಾಯಕಳು ಇದ್ದಳು. ಆ ವೇಳೆಯಲ್ಲಿ ಆಕೆಗೆ ಆರೋಪಿ ಕೊಡುತ್ತಿದ್ದ ಹಿಂಸೆ ತಾಳಲಾರದೇ ಅಗ್ನಿಶಾಮಕ ದಳದವರ ಬಾವಿಯಲ್ಲಿ ಹೋಗಿ ಬಿದ್ದಿದ್ದಳು . ಆಕೆಯನ್ನು ಸದರಿ ಅಗ್ನಿಶಾಮಕ ದಳದವರು ಕಾಪಾಡಿದರು. ಆಕೆ ಬಳಿ ನಾನು ಕೆಲವು ರಸೀದಿಗಳನ್ನು ಕೊಟ್ಟಿದ್ದೆ ಎಂದು ಸಾಕ್ಷಿ ನುಡಿಯುವರು . ರಮಾ

ಭಂಡಾರಿ ಪ್ರಕರಣ ಶುದ್ಧ ಸುಳ್ಳು ಮತ್ತು ತಪ್ಪಿಸಿಕೊಳ್ಳುವುದಕ್ಕಾಗಿ ನಾನು ಈ ಎಲ್ಲಾ ಕಾರಣವನ್ನೆಲ್ಲಾ ಕೊಡುತ್ತಿದ್ದೇನೆ ಎಂದರೆ ಸರಿಯಲ್ಲ. ರಮಾ ಭಂಡಾರಿಯನ್ನು ಸಾಕ್ಷಿಯನ್ನಾಗಿ ನನಗೆ ನ್ಯಾಯಾಲಯಕ್ಕೆ ಕರೆಸಲು ಸಾಧ್ಯವಿಲ್ಲ. ರಮಾ ಭಂಡಾರಿ ಆರೋಪಿ ವಿರುದ್ಧ ಯಾವುದೇ ಪ್ರಕರಣ ದಾಖಲು ಮಾಡಿಲ್ಲ. ದಿನಾಂಕ 18.08.2012 ರಂದು ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ನನಗೆ ಅನೇಕ ನ್ಯೂನ್ಯತೆಗಳು ನಾನು ಸಲ್ಲಿಸಿರುವ ಸಾಗಾಣಿಕಾ ಬಿಲ್ಲಿನಲ್ಲಿ ಇದೆ ಎಂದು ನೋಟಿಸು ಕೊಟ್ಟಿದ್ದಾರೆ ಎಂದರೆ ಹೌದು ಅದು ತಪ್ಪು ನೋಟಿಸು ಇದೆ ಅದಕ್ಕೆ ನಾನು ಉತ್ತರ ಕೊಟ್ಟಿದ್ದೇನೆ ಎಂದು ಸಾಕ್ಷಿ ನುಡಿಯುವರು . ಆ ನೋಟರಿಕೃತ ನೋಟಿಸು ನಕಲನ್ನು ನಿ.ಡಿ. 15 ಎಂದು ಗುರುತಿಸಲಾಯಿತು. ದಿನಾಂಕ 24.11.2012 ರಂದು ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ನನಗೆ ಇನ್ನೊಂದು ನೋಟಿಸನ್ನು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ಅಲ್ಲಗಳೆದಿದ್ದಾರೆ . ಆದರೆ ಎದುರು ಮಾಡಿದ ದಾಖಲಾತಿ ಯಾವುದು ಎಂದು ತಿಳಿಯಲು ಮಾತ್ರ ಅದನ್ನು ನಿ.ಡಿ. 16 ಎಂದು ಗುರುತಿಸಲಾಯಿತು. ದಿನಾಂಕ 29.12.2012 ರಂದು ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ನನಗೆ ಅನೇಕ ನ್ಯೂನ್ಯತೆಗಳು ನಾನು ಸಲ್ಲಿಸಿರುವ ಸಾಗಾಣಿಕಾ ಬಿಲ್ಲಿನಲ್ಲಿ ಇದೆ ಎಂದು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ನೋಟಿಸು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ಅಲ್ಲಗಳೆದಿದ್ದಾರೆ . ಆದರೆ ಎದುರು ಮಾಡಿದ ದಾಖಲಾತಿ ಯಾವುದು ಎಂದು ತಿಳಿಯಲು ಮಾತ್ರ ಅದನ್ನು ನಿ.ಡಿ. 17 ಎಂದು ಗುರುತಿಸಲಾಯಿತು. ನನಗೆ ಹಣ ಎಲ್ಲಾ ಕೊಟ್ಟಿದ್ದಾರೆ ಯಾವುದೂ ಕಡಿತ ಮಾಡಿಲ್ಲ ಮತ್ತು ಬಾಕಿ ಇಟ್ಟಿಲ್ಲ ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ. ದಿನಾಂಕ 28.02.2013 ರಂದು ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿ ನನಗೆ ಫೆಬ್ರವರಿ 2012 ರ ಆಹಾರ ಪೂರೈಕೆಯಾಗದೇ ಇರುವುದರಿಂದ ಶಾಲೆಯಲ್ಲಿ ಬಿಸಿಯೂಟ ನಿಲ್ಲುವ ಪರಿಸ್ಥಿತಿ ಎದುರಾಗಿದೆ ಎಂದು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ನೋಟಿಸು ಕೊಟ್ಟಿದ್ದಾರೆ ಎಂದರೆ ಸರಿಯಲ್ಲ. ಸಾಕ್ಷಿ ಅದನ್ನು ಅಲ್ಲಗಳೆದಿದ್ದಾರೆ . ಆದರೆ ಎದುರು ಮಾಡಿದ ದಾಖಲಾತಿ ಯಾವುದು ಎಂದು ತಿಳಿಯಲು ಮಾತ್ರ ಅದನ್ನು ನಿ.ಡಿ. 18 ಎಂದು ಗುರುತಿಸಲಾಯಿತು. ನಿ.ಡಿ. 13 ರಿಂದ 16 ರವರೆಗೆ ದಾಖಲಾತಿಗಳಲ್ಲಿ ನನ್ನ ರುಜು ಇದೆ ಎಂದರೆ ನನಗೆ ನನ್ನ ರುಜು ಗುರುತಿಸುವ ಪರಿಸ್ಥಿತಿ ಈಗ ಇಲ್ಲ ನಾನು ರುಜು ಹಾಕಬೇಕಾದರೆ ರುಜುವಿನೊಂದಿಗೆ ದಿನಾಂಕ

ನಮೂದಿಸುತ್ತೇನೆ ಎಂದು ಸಾಕ್ಷಿ ನುಡಿಯುತ್ತಾರೆ. ಕಳೆದ ಬಾರಿ ನಾನು ನನ್ನ ಮುಖ್ಯ ವಿಚಾರಣೆಯ ಮತ್ತು ಭಾಗಶಃ ಪಾಟೀ ಸವಾಲಿನ ಸಾಕ್ಷ್ಯದಲ್ಲಿ ರುಜು ಹಾಕಿದಾಗ ಅದರೊಂದಿಗೆ ದಿನಾಂಕ ಹಾಕಿಲ್ಲ ಎಂದರೆ ಹೌದು . ನಿ.ಡಿ. 14 ರಲ್ಲಿ ತೋರಿಸಿದ ರುಜು ನನ್ನದಾಗಿದೆಯಾ ಎಂದರೆ ಸಾಕ್ಷಿಯು ನನ್ನದಲ್ಲದಾಗಿರಬಹುದು ಎಂದು ನುಡಿದಿರುತ್ತಾರೆ. ದಿನಾಂಕ 08.03.2013 ರಂದು ತಾಲೂಕು ಪಂಚಾಯತಿಯ ಕಾರ್ಯ ನಿರ್ವಾಹಕ ಅಧಿಕಾರಿಯವರು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ಆದೇಶ ಹೊರಡಿಸಿದ್ದಾರೆ ಎಂದರೆ ಹೌದು . ಅದನ್ನು ನಿ.ಡಿ. 19 ಎಂದು ಗುರುತಿಸಲಾಯಿತು. ದಿನಾಂಕ 03.10.2013 ರಂದು ನನಗೆ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಯವರು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ನೋಟಿಸನ್ನು ನೀಡಿದ್ದಾರೆ ಎಂದರೆ ಹೌದು . ಅದನ್ನು ನಿ.ಡಿ. 20 ಎಂದು ಗುರುತಿಸಲಾಯಿತು. ಆ ನೋಟಿಸನ್ನು ನೀಡಿದಾಗ ಆರೋಪಿಯನ್ನು ಈ ಪ್ರಕರಣದಲ್ಲಿ ಟ್ರ್ಯಾಪ್ ಮಾಡಲಾಗಿತ್ತು ಮತ್ತು ಆರೋಪಿ ಕೆಲಸದಲ್ಲಿ ಇರಲಿಲ್ಲ ಎಂದರೆ ಹೌದು . ದಿನಾಂಕ 18.11.2013 ರಂದು ನನಗೆ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಯವರು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ನೋಟಿಸನ್ನು ನೀಡಿದ್ದಾರೆ ಎಂದರೆ ಹೌದು . ಅದನ್ನು ನಿ.ಡಿ. 21 ಎಂದು ಗುರುತಿಸಲಾಯಿತು. ಆ ನೋಟಿಸನ್ನು ನೀಡಿದಾಗ ಆರೋಪಿಯನ್ನು ಈ ಪ್ರಕರಣದಲ್ಲಿ ಟ್ರ್ಯಾಪ್ ಮಾಡಲಾಗಿತ್ತು ಮತ್ತು ಆರೋಪಿ ಕೆಲಸದಲ್ಲಿ ಇರಲಿಲ್ಲ ಎಂದರೆ ಹೌದು . ದಿನಾಂಕ 05.02.2014 ರಂದು ನನಗೆ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಯವರು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ನೋಟಿಸನ್ನು ನೀಡಿದ್ದಾರೆ ಎಂದರೆ ನೆನಪಿಲ್ಲ . ಅದನ್ನು ನಿ.ಡಿ. 22 ಎಂದು ಗುರುತಿಸಲಾಯಿತು. ದಿನಾಂಕ 26.08.2013 ರಂದು ನನಗೆ ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಯವರು ಈಗ ತೋರಿಸಿದ ನೋಟರಿಕೃತ ನಕಲಿನ ಪ್ರಕಾರ ಕೆ ಎಂ ಎಫ್ ಗೆ ಒಂದು ಅರ್ಜಿಯನ್ನು ಬರೆದಿದ್ದಾರೆ ಎಂದರೆ ನನಗೆ ಗೊತ್ತಿಲ್ಲ . ನನಗೆ ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಆಹಾರ ಪದಾರ್ಥ ಸರಬರಾಜು ಮಾಡಲು ನೀಡಿದ್ದ ಪರವಾನಗಿಯನ್ನು ನಂತರ ರದ್ದು ಮಾಡಿದರು ಎಂದರೆ ಸರಿಯಲ್ಲ. ಆದರೆ E-procurement ಪದ್ಧತಿ ಬಂತು ಆಗ ನನಗೆ ಟೆಂಡರ್ ಸಲ್ಲಿಸಿಕೊಳ್ಳಲು ಆಗಲಿಲ್ಲ ಆದ್ದರಿಂದ ನನಗೆ ಟೆಂಡರ್ ಗುತ್ತಿಗೆ ತಪ್ಪಿಹೋಗಿರುತ್ತದೆ . ಈಗ ತೋರಿಸಿದ ನೋಟರಿಕೃತ ದಾಖಲಾತಿಯಲ್ಲಿ

ನನಗೆ ಟೆಂಡರ್ ತಪ್ಪಿ ಹೋಗಿರುವುದು ನಮೂದು ಇದೆ ಎಂದರೆ ಹೌದು . ಅದು ಎರಡು ಹಾಳೆ ಮೂರು ಪುಟ ಇದೆ . ಅದನ್ನು ನಿ.ಡಿ. 23 ಎಂದು ಗುರುತಿಸಲಾಯಿತು. ಅಕ್ಷರ ದಾಸೋಹ ಯೋಜನೆಯಡಿಯಲ್ಲಿ ಹಾಲು ಪುಡಿ ಸರಬರಾಜು ಮಾಡುವ ಕುರಿತು ಬಿಲ್ಲು ದೃಢೀಕರಣ ವಿಚಾರದಲ್ಲಿ ಯಾರು ದೃಢೀಕರಣ ಮಾಡಬೇಕು ಎಂದು ಸರ್ಕಾರದಲ್ಲಿ ಸ್ಪಷ್ಟತೆ ಇರಲಿಲ್ಲ ಎಂದರೆ ಸರಿಯಲ್ಲ. ಬಿ ಇ ಓ ಮತ್ತು ನೋಡಲ್ ಆಫೀಸರ್ ಅದನ್ನು ದೃಢೀಕರಣ ಮಾಡಬೇಕಿತ್ತು ಎಂದು ಸಾಕ್ಷಿ ಸ್ವತಃ ನುಡಿದಿರುತ್ತಾರೆ. ಆ ವಿಚಾರದಲ್ಲಿ ಸ್ಪಷ್ಟತೆ ಇಲ್ಲ ಎಂದು ತಾಲೂಕು ಪಂಚಾಯತಿ ಕಾರ್ಯ ನಿರ್ವಾಹಕ ಅಧಿಕಾರಿಯವರು ಕ್ಷೇತ್ರ ಶಿಕ್ಷಣಾಧಿಕಾರಿಯವರಿಗೆ ಪತ್ರ ಬರೆದ ವಿಚಾರ ನನಗೆ ಗೊತ್ತಿಲ್ಲ. ನನಗೆ ಹಾಲು ಪುಡಿ ಸರಬರಾಜು ಮಾಡುವ ಯಾವುದೇ ಪರವಾನಗಿ ಇಲ್ಲದೇ ಇದ್ದರೂ ನಾನು ಅಧಿಕ ಪ್ರಸಂಗ ಮಾಡಿ ಹಾಲು ಪುಡಿ ಸರಬರಾಜು ಮಾಡುತ್ತಿದ್ದೆ ಎಂದರೆ ಸರಿಯಲ್ಲ. ನಾನು ಹಾಲು ಪುಡಿ ಸರಬರಾಜು ಮಾಡಿದ ಬಗ್ಗೆ ಮುಖ್ಯೋಪಾಧ್ಯಾಯರಿಂದ ಪಡೆದ ಪತ್ರಗಳನ್ನು ಆರೋಪಿ ಕಚೇರಿಯಲ್ಲಿ ಸಲ್ಲಿಸಿದಾಗ ಆ ಬಗ್ಗೆ ಆರೋಪಿ ಕಚೇರಿಯಲ್ಲಿ ಆವಕ ಜಾವಕ ಪುಸ್ತಕದಲ್ಲಿ ನಮೂದು ಆಗಿದೆಯಾ ಎಂದು ನನಗೆ ಗೊತ್ತಿಲ್ಲ.

9. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನನ್ನ ಮೊಬೈಲ್ ಅನ್ನು ನಾನು ಪೊಲೀಸ್ ನವರಿಗೆ ಕೊಟ್ಟಿದ್ದೇನೆ. ಆ ಬಗ್ಗೆ ಪಂಚನಾಮೆಯಲ್ಲಿ ಲೋಕಾಯುಕ್ತ ಪೊಲೀಸ್ ನವರು ಬರೆದಿದ್ದಾರಾ ಎಂದು ಗೊತ್ತಿಲ್ಲ. ಅದನ್ನು ವಾಪಸ್ಸು ಕೊಟ್ಟ ಬಗ್ಗೆ ಪಂಚನಾಮೆಯಲ್ಲಿ ಬರೆದಿದ್ದಾರಾ ಎಂದರೆ ಗೊತ್ತಿಲ್ಲ. ನಾನು ಪಂಚನಾಮೆ ಓದಿ ಸಹಿ ಮಾಡಿದ್ದೇನೆ. ಆ ಮೊಬೈಲ್ ನಲ್ಲಿ ಇದ್ದ ಆರೋಪಿಯ ಜೊತೆಗಿನ ನನ್ನ ಸಂಭಾಷಣೆಯನ್ನು ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಪೊಲೀಸ್ ನವರು ಚಾಲು ಮಾಡಿ ಕೇಳಿಸಿರುತ್ತಾರೆ. ಆ ಸಂಭಾಷಣೆಯನ್ನು ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದಿದ್ದಾರೆ. ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ಮೊಬೈಲ್ ನಲ್ಲಿ ಇದ್ದ ಆ ಸಂಭಾಷಣೆಯನ್ನು ಅವರ ಪೆನ್ ಡ್ರೈವ್ ಗೆ ವರ್ಗಾವಣೆ ಮಾಡಿಕೊಂಡರು. ಅವರ ಪೆನ್ ಡ್ರೈವ್ ಗೆ ಹಾಕಿಕೊಂಡಿದ್ದನ್ನು ಪಂಚನಾಮೆಯಲ್ಲಿ ನಮೂದು ಮಾಡಿಕೊಂಡಿದ್ದಾರೆ . ಆ ರೀತಿ ಪ್ರಾಯೋಗಿಕ ಪಂಚನಾಮೆಯಲ್ಲಿ ಬರೆದಿಲ್ಲ ಎಂದರೆ ಬರೆದಿರಬಹುದು ಎಂದು ನನಗೆ ಅನಿಸುತ್ತದೆ . ಪ್ರಾಯೋಗಿಕ ಪಂಚನಾಮೆ ಸಮಯದಲ್ಲಿ ನಾನು ಸಿ.ಡಿ. ಮಾಡಿ ಆ ಸಂಭಾಷಣೆಯನ್ನು ಹಾಜರುಪಡಿಸುತ್ತೇನೆ ಎಂದು ಹೇಳಿದ್ದೇನಾ ಎಂದರೆ

ಪೊಲೀಸ್ ನವರು ಸಿ.ಡಿ. ಮಾಡಿಕೊಂಡರು. ನನ್ನ ಮೊಬೈಲ್ ಅನ್ನು ಲೋಕಾಯುಕ್ತ ಪೊಲೀಸ್ ನವರಿಗೆ ನಾನು ಕೊಟ್ಟಿಲ್ಲ ಮತ್ತು ಅವರು ಪೆನ್ ಡ್ರೈವ್ ಗೆ ಹಾಗೂ ಸಿ.ಡಿ. ಗೆ ಅದನ್ನು ನಕಲು ಮಾಡಿಕೊಂಡಿಲ್ಲ ಎಂದರೆ ಸರಿಯಲ್ಲ. ನಾನು ಈಗಲೂ ಮೊಬೈಲ್ ಉಪಯೋಗಿಸುತ್ತೇನೆ ಆದರೆ ಆಗ ಇದ್ದ ಮೊಬೈಲ್ ಈಗ ಇರುವುದಿಲ್ಲ. ಆರೋಪಿ ಜೊತೆ ಸಂಭಾಷಣೆ ಧ್ವನಿ ಮುದ್ರಣ ಮಾಡಿಕೊಂಡಿದ್ದ ಮೊಬೈಲ್ ನನ್ನ ಹೆಸರಿಗೆ ಇತ್ತು . ಅದು ಟಾಟಾ ಇಂಡಿಕಾಂ ಮೊಬೈಲ್ ಆಗಿತ್ತು. ನನಗೆ android mobile ಕೊಟ್ಟರೆ ಅದರಲ್ಲಿ ಸಂಭಾಷಣೆ ಹೇಗೆ ಧ್ವನಿ ಮುದ್ರಣ ಮಾಡಿಕೊಳ್ಳಬೇಕು ಎಂದು ಗೊತ್ತಿದೆ . ನಾನು ಮೊಬೈಲ್ ಖರೀದಿ ಮಾಡಿದ ಬಗ್ಗೆ ಬಿಲ್ಲು ಈಗ ನನ್ನ ಬಳಿ ಇಲ್ಲ. ನನ್ನ ಮೊಬೈಲ್ ನಲ್ಲಿ ಕರ್ಕಶವಾಗಿ ಧ್ವನಿ ಮುದ್ರಣ ಆಗುತ್ತದೆ ಎಂದು ಲೋಕಾಯುಕ್ತ ಪೊಲೀಸ್ ನವರ ಮೊಬೈಲ್ ನಲ್ಲಿ ಆ ಸಂಭಾಷಣೆ ಧ್ವನಿ ಮುದ್ರಣ ಮಾಡಿಕೊಂಡಿದ್ದೇನಾ ಎಂದು ನನಗೆ ಸರಿಯಾಗಿ ನೆನಪು ಬರುತ್ತಿಲ್ಲ ಎಂದು ಸಾಕ್ಷಿ ಸ್ವತಃ ನುಡಿಯುತ್ತಾರೆ. ಪ್ರಾಯೋಗಿಕ ಪಂಚನಾಮೆಯಲ್ಲಿ ಯಾವ ಕಂಪನಿ ಮೊಬೈಲ್ , ಯಾರಿಗೆ ಸೇರಿದ ಮೊಬೈಲ್ ಎಂದು ನಮೂದು ಮಾಡಿಲ್ಲ . ಅದು android mobile ಆಗಿತ್ತಾ ಎಂದರೆ ನನಗೆ ಈಗ ನೆನಪು ಇಲ್ಲ. ನನ್ನ mobile ನಲ್ಲಿ ನಾನು ಧ್ವನಿ ಮುದ್ರಣ ಮಾಡಿಕೊಳ್ಳಲು ಏನು ವಿಧಾನ ಅನುಸರಿಸಿದೆ ಎಂದರೆ ಈಗ ನನಗೆ ನೆನಪಿಲ್ಲ. ನನ್ನ ಬಳಿ ಯಾವ ಮೊಬೈಲ್ ಇರಲಿಲ್ಲ ಮತ್ತು ನನಗೆ ರೆಕಾರ್ಡ್ ಮಾಡಿಕೊಳ್ಳುವ ಪದ್ಧತಿ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ನ್ಯಾಯಾಲಯದ ಸಮಯಾವಕಾಶ ಮುಗಿದಿದ್ದರಿಂದ ಪಾಟೀ ಸವಾಲನ್ನು ಮುಂದೂಡಲಾಯಿತು).

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮೂಲಕ ಬೆರಳಚ್ಚು ಮಾಡಿಸಲಾಗಿದೆ)

ಓ.ಹೇ.ಕೇ.ಸ.ಇ.

(ಡಿ.ಎಸ್. ವಿಜಯಕುಮಾರ್)
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉತ್ತರ ಕನ್ನಡ , ಕಾರವಾರ